**ಓ. ಎಸ್ .:248/18**
**ಪಿ. ಡಬ್ಲ್ಯೂ: 1**

ದಿನಾಂಕಃ 21-10-2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** 1 ನೇ ಪ್ರತಿವಾದಿಯರ ಪರ ವಕೀಲರಾದ ಶ್ರೀ ಎಮ್. ಕೆ .ಡಿ. ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

ಪಾಟೀ ಸವಾಲುಃ 5 ಮತ್ತು 6 ನೇ ಪ್ರತಿವಾದಿಯರ ಪರ ವಕೀಲರಾದ ಶ್ರೀ ಆರ್. ಎಮ್. ಬಿ. ಅವರು ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ ಆದ ಕಾರಣ ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

ಪಾಟೀ ಸವಾಲುಃ ಪ್ರತಿವಾದಿ 7 ಎ- ಡಿ , 8 ರಿಂದ 12 ಮತ್ತು 14 ಪರ ವಕೀಲರಾದ ಶ್ರೀ. ಎಸ್. ಬಿ .ಎಚ್. ಅವರಿಂದಃ

ನಾನು ಬಿ. ಎ. ಪದವಿದರಳಿರುತ್ತೇನೆ. ಅಂತಿಮ ವರ್ಷದ ಪದವಿಯನ್ನು ಇದೆ ವರ್ಷ ಮುಗಿಸಿರುತ್ತೇನೆ. 2018 ನೇ ಇಸವಿಯಲ್ಲಿ ನಾನು ಬಿ. ಎ. ಪದವಿಯಲ್ಲಿ ಅಭ್ಯಾಸ ಮಾಡುತ್ತಿದ್ದೆ. ನಾನು ದಾವೆ ಹಾಕುವ ಕಾಲಕ್ಕೆ ಬಿ. ಎ. ವಿದ್ಯಾಭ್ಯಾಸ ಮಾಡುತ್ತಿದ್ದ ಬಗ್ಗೆ ಮಾಹಿತಿ ವಕೀಲರಿಗೆ ನೀಡಿರುತ್ತೇನೆ. ನಾನು ದಿನಾಂಕಃ 01.06.1999 ರಂದು ಜನಿಸಿರುತ್ತೇನೆ. 2 ನೇ ವಾದಿ 1994 ನೇ ಇಸವಿಯುಲ್ಲಿ ಜನಿಸಿರುತ್ತಾಳೆ ಅವಳ ಜನ್ಮ ದಿನಾಂಕ ಗೊತ್ತಿರುವುದಿಲ್ಲ. 2 ನೇ ವಾದಿ ಎಸ್. ಎಸ್. ಎಲ್. ಸಿ. ವರೆಗೆ ವಿದ್ಯಾಭ್ಯಾಸ ಮಾಡಿರುತ್ತಾಳೆ. 2 ನೇ ವಾದಿಯನ್ನು ಬನಹಟ್ಟಿಗೆ ಕೊಟ್ಟು 2012 ರಲ್ಲಿ ಮದುವೆ ಮಾಡಲಾಗಿರುತ್ತದೆ. 2 ನೇ ವಾದಿ ಮದುವೆ ಆದಾಗಿನಿಂದ ಅವಳ ಗಂಡನ ಮನೆಯಲ್ಲಿ ಇರುತ್ತಾಳೆ ಎಂದರೆ ಸರಿ. 2 ನೇ ವಾದಿಯ ಗಂಡ ಬಸ್ ಕಂಡಕ್ಟರ್ ಇರುತ್ತಾನೆ. ಪ್ರತಿವಾದಿ 1 ಮತ್ತು 2 ನನ್ನ ಪೋಷಕರು ಮತ್ತು ಪ್ರತಿವಾದಿ 3 ಮತ್ತು 4 ನನ್ನ ಸಹೋದರರು ಇರುತ್ತಾರೆ. ನಾನು ಪ್ರತಿವಾದಿ 1 ರಿಂದ 4 ಜೊತೆಯಲ್ಲಿಯೇ ವಾಸ ಇರುತ್ತೇವೆ ಅಂದರೆ ಸಾಕ್ಷಿ ನಾನು 2 ನೇ ವಾದಿಯ ಜೊತೆಗೆ ಬನಹಟ್ಟಿಯಲ್ಲಿಯೇ 4 ವರ್ಷಗಳಿಂದ ಇರುತ್ತೇನೆ. ದಾವಾ ಹಾಕುವ ಕಾಲಕ್ಕೆ ನಾನು ಮತ್ತು ನನ್ನ ಅಕ್ಕ ಕೆಮ್ಮನಕೊಳ್ಳ ಗ್ರಾಮದಲ್ಲಿ ಪ್ರತ್ಯೇಕವಾಗಿ ವಾಸ ಇದ್ದೆವು. ನಾನು, ನನ್ನ ಅಕ್ಕ ವಾಸ ಇದ್ದ ಕೆಮ್ಮನಕೊಳ್ಳ ಗ್ರಾಮದ ಮನೆಯನ್ನು ನನ್ನ ತಂದೆ ಕಟ್ಟಿಸಿರುತ್ತಾರೆ ಅದರ ನಂಬರ್ ಮತ್ತು ಅದು ಯಾರ ಹೆಸರಿನಲ್ಲಿರುತ್ತದೆ ಎಂದು ಗೊತ್ತಿಲ್ಲ. ದಾವಾ ಹಾಕಲು ಮಾಹಿತಿಯನ್ನು ನಾನು ಮತ್ತು 2 ನೇ ವಾದಿ ಕೊಟ್ಟಿರುತ್ತೇವೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ತಯಾರಿಸಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. 2 ನೇ ವಾದಿಯ ಪರವಾಗಿ ಸಾಕ್ಷಿ ನುಡಿಯಲು ನನಗೆ ಅವಳು ಅಧಿಕಾರ ಪತ್ರ ಕೊಟ್ಟಿರುತ್ತಾಳೆಯೇ ಅಂದರೆ ಸಾಕ್ಷಿ ಅವಳು ನನ್ನ ಪರವಾಗಿ ನೀನೆ ಸಾಕ್ಷಿ ಹೇಳು

ಅಂತಾ ಹೇಳಿರುತ್ತಾಳೆ. ನನ್ನ ತಂದೆ ತಾಯಿ ಮತ್ತು ಅಣ್ಣಂದಿರು ಹಾಗೂ ನನ್ನ ದೊಡ್ಡಣ್ಣನ ಹೆಂಡತಿ ಜೊತೆಯಲ್ಲಿಯೇ ವಾಸ ಇರುತ್ತಾಳೆ. ಈ ಮೇಲೆ ಹೇಳಿದ ವಿಚಾರವನ್ನು ವಾದ ಪತ್ರದಲ್ಲಿ ಬರೆಸಿರುತ್ತೇನೆ. ಈ ದಾವೆಯನ್ನು ಸರ್ವೆ ನಂ. 93, 63, 92, 73 ಜಮೀನುಗಳ ಮೇಲೆ ಹಾಕಿರುತ್ತೇನೆ. ಸರ್ವೆ ನಂ.93 ರ ವಿಸ್ತೀರ್ಣ 5 ಎಕರೆ, 22 ಗುಂಟೆ, ಪಿ.ಕೆ. 3 ಗುಂಟೆ, ಉಳಿದ ಜಮೀನುಗಳ ವಿಸ್ತೀರ್ಣ ನೆನಪಿರುವುದಿಲ್ಲ. ಈ 4 ಜಮೀನುಗಳನ್ನು ಬಿಟ್ಟು ಬೇರೆ ಜಮೀನುಗಳ ಮೇಲೆ ದಾವೆ ಮಾಡಿರುವುದಿಲ್ಲ. ಈ 4 ಜಮೀನುಗಳ ಚಕಬಂದಿ ಹೇಳಲು ಬರುವುದಿಲ್ಲ. ಸರ್ವೆ ನಂ. 93 ಮೂಲತಃ ಶಿವನಾಯಕ ದೇವನಾಯಕ ನಾಯಕರವರಿಗೆ ಸೇರಿದ್ದು. ಸರ್ವೆ ನಂ.61/2 6 ಎಕರೆ 21 ಗುಂಟೆ ನಮ್ಮ ಮನೆತನಕ್ಕೆ ಸೇರಿದ ಜಮೀನು ಇರುತ್ತದೆ ಅಂದರೆ ಸಾಕ್ಷಿ ಅದು ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಇರುತ್ತದೆ ಎನ್ನುತ್ತಾರೆ. ಸರ್ವೆ ನಂ.61/2 ನ್ನು ನನ್ನ ತಂದೆ ಯಾವಾಗ ಖರೀದಿ ಮಾಡಿರುತ್ತಾರೆ ಅಂದರೆ ಸಾಕ್ಷಿ 1992/2000 ಇಸವಿಯಲ್ಲಿ ಎನ್ನುತ್ತಾರೆ. ಸರ್ವೆ ನಂ. 61/2 ರ ಪೈಕಿ 4 ಎಕರೆ 21 ಗುಂಟೆ ಜಮೀನನ್ನು ಒಟ್ಟು ಕುಟುಂಬದಲ್ಲಿ ಇದ್ದಾಗ ನನ್ನ ತಂದೆ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. 17.02.1999 ರಲ್ಲಿ ನಾನು ಜನಿಸಿರಲಿಲ್ಲ ಎಂದರೆ ಸರಿ. ದಿಃ 5.10.2000 ರಂದು 2 ಎಕರೆ ಜಮೀನನ್ನು ಖರೀದಿ ಮಾಡುವ ಕಾಲಕ್ಕೆ ನಾನು 10 ತಿಂಗಳವಳಿದ್ದೆ ಎಂದರೆ ಸರಿ. ನಾನು ಚಿಕ್ಕವಳಿದ್ದ ಕಾರಣ ನನಗೆ ಸರ್ವೆ ನಂ.61/2 ರ ಜಮೀನಿನ ಖರೀದಿಯ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.61/2 ರ ಬಗ್ಗೆ ನನಗೆ ಮಾಹಿತಿ ಇರುತ್ತದೆ ಎಂದು ನನ್ನ ತಂದೆಯ ಮಾತು ಕೇಳಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರಿನಲ್ಲಿ ಮನೆ ನಂ. 32/2, ಮತ್ತು 45 ಮನೆಗಳು ಇರುತ್ತವೆ ಮತ್ತು ನನ್ನ ತಾಯಿಯ ಹೆಸರಿನಲ್ಲಿ ಖಾಲಿ ಜಾಗ ನಂ.113/ಎ ಮತ್ತು 313/2 ಇರುತ್ತವೆ ಎಂದರೆ ಸಾಕ್ಷಿ ನನಗೆ ಅವುಗಳ ಬಗ್ಗೆ ಮಾಹಿತಿ ಇರುವುದಿಲ್ಲ ಎನ್ನುತ್ತಾರೆ. ಆಸ್ತಿ ನಂ. 32/2, 45, 113/ಎ ಮತ್ತು 313/2 ಗಳನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿಲ್ಲ ಅಂದರೆ ಸಾಕ್ಷಿ ಆ ಆಸ್ತಿಗಳ ಬಗ್ಗೆ ನೆನಪು ಇರುವುದಿಲ್ಲ ಆದ ಕಾರಣ ಈ ದಾವೆಯಲ್ಲಿ ಸೇರ್ಪಡೆ ಮಾಡಿರುವುದಿಲ್ಲ ಎನ್ನುತ್ತಾರೆ. ಪ್ರತಿವಾದಿ 1 ರಿಂದ 4 ಮನೆ ನಂ.32/2 ಮತ್ತು 45 ರಲ್ಲಿ ವಾಸ ಇರುತ್ತಾರೆ ಅಂದರೆ ಸಾಕ್ಷಿ ಆ ಮನೆಯು ಖಾಲಿ ಇರಬಹುದು ಆದರೆ ಪ್ರತಿವಾದಿ 1 ರಿಂದ 4 ರವರು ಸರ್ವೆ ನಂ. 61/2 ರಲ್ಲಿ ಮನೆ ಕಟ್ಟಿಸಿಕೊಂಡು ವಾಸ ಇರುತ್ತಾರೆ ಎನ್ನುತ್ತಾರೆ. ಸರ್ವೆ ನಂ.61/2 ರಲ್ಲಿ ಕಟ್ಟಿರುವ ಮನೆ ನಂಬರ ನನಗೆ ಹೇಳಲಾಗುವುದಿಲ್ಲ. ನಾನು ನನ್ನ ತಂದೆ ತಾಯಿ ಮನೆಗೆ ನನ್ನ ಅಕ್ಕನ ಮನೆಯಿಂದ ಹೋಗುತ್ತಾ ಬರುತ್ತಾ ಇರುತ್ತೇನೆ. 2 ನೇ ವಾದಿಯ ಗಂಡ ನನ್ನ ಪದವಿ ವಿದ್ಯಾಭ್ಯಾಸದ ಖರ್ಚನ್ನು

ಆತನೆ ಭರಿಸಿರುತ್ತಾನೆ. 1 ರಿಂದ ದ್ವಿತೀಯ ಪಿ. ಯು. ವರೆಗೆ ನನ್ನ ವಿದ್ಯಾಭ್ಯಾಸದ ಖರ್ಚನ್ನು ನನ್ನ ತಂದೆ ತಾಯಿ ನೋಡಿರುತ್ತಾರೆ. ನನ್ನ ತಂದೆ ಸಹಕಾರಿ ಸೊಸಾಯಿಟಿ ಕಾರ್ಯದರ್ಶಿ ಎಂದು ಉಪ್ಪಾರಟ್ಟಿ ಗ್ರಾಮದಲ್ಲಿ ಕೆಲಸ ಮಾಡುತ್ತಾರೆ. ನನ್ನ ತಂದೆ ಕಾರ್ಯದರ್ಶಿ ಯಾಗಿ ಎಷ್ಟನೇ ಇಸವಿಯಲ್ಲಿ ನೇಮಕವಾಗಿರುತ್ತಾರೆಂದು ಗೊತ್ತಿಲ್ಲ. ನನ್ನ ತಂದೆ ಈಗಲೂ ಸಹ ಸೇವೆಯಲ್ಲಿ ಇರುತ್ತಾರೆ. ನನ್ನ ತಂದೆ ಉಪ್ಪಾರಟ್ಟಿಯಲ್ಲಿ ಮಾತ್ರ ಸೇವೆ ಸಲ್ಲಿಸಿರುತ್ತಾರೋ ಅಥವಾ ಬೇರೆ ಕಡೆ ಸೇವೆ ಸಲ್ಲಿಸಿರುತ್ತಾರೆಂದು ನನಗೆ ಗೊತ್ತಿಲ್ಲ. ನನ್ನ ತಂದೆ ಉಪ್ಪಾರಟ್ಟಿಯಲ್ಲಿ ಈಗ 20 ವರ್ಷದಿಂದ ಮೇಲ್ಪಟ್ಟೂ ವರ್ಷದಿಂದ ಕೆಲಸ ಮಾಡುತ್ತಿದ್ದಾರೆ. ನನ್ನ ತಂದೆಗೆ ನೌಕರಿಗೆ ಸೇರಿದಾಗ ಎಷ್ಟು ಸಂಬಳವಿತ್ತು, ಈಗ ಎಷ್ಟು ಸಂಬಳವಿರುತ್ತದೆ ಎಂದು ಗೊತ್ತಿಲ್ಲ. ನನ್ನ ತಂದೆ 20 ವರ್ಷಗಳಿಂದ ಆತನ ಸಹೋದರರಿಂದ ಬೇರೆ ವಾಸವಿರುತ್ತಾನೆಂದು ತೋರಿಸಲು ಬಾಯಿ ಮಾತಿನ ಹೇಳಿಕೆ ಬಿಟ್ಟು ಬೇರೆ ದಾಖಲೆ ಇರುವುದಿಲ್ಲ. ಸರ್ವೆ ನಂ.61/2 ಜಮೀನನ್ನು ಖರೀದಿ ಮಾಡಲು ನಿನ್ನ ತಂದೆಗೆ ಹಣ ಎಲ್ಲಿಂದ ಬಂದಿರುತ್ತದೆ ಎಂದರೆ ಸಾಕ್ಷಿ ತನ್ನ ಸಂಬಳದ ಹಣದಲ್ಲಿ ಖರೀದಿ ಮಾಡಿರುತ್ತಾರೆ ಎನ್ನುತ್ತಾರೆ. ನನ್ನ ತಂದೆ ಸಂಬಳನವನ್ನು ಬ್ಯಾಂಕನಲ್ಲಿ ಇಡುತ್ತಿದ್ದ. ಪ್ರತಿವಾದಿ 5 ಮತ್ತು 6 ರವರು ಓ. ಎಸ್. 177/2011 ದಾವೆಯನ್ನು ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಓ. ಎಸ್. 177/2011 ರ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. ಓ. ಎಸ್. 177/2011 ರ ಬಗ್ಗೆ ಈ ದಾವಯಲ್ಲಿ ಯಾವ ಆಧಾರದ ಮೇಲೆ ಬರೆಸಿರುತ್ತೀಯಾ ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಓ. ಎಸ್. 177/2011 ರ ರಾಜಿ ಡಿಕ್ರಿಯಲ್ಲಿ ಸರ್ವೆ ನಂ. 61/2 ನ್ನು ಈ ದಾವೆಯ ಪ್ರತಿವಾದಿ 2 ರಿಂದ 4 ರವರ ಪಾಲಿಗೆ ಹೋಗಿರುತ್ತದೆ ಅಂದರೆ ಸರಿ. ಓ. ಎಸ್. 177/2011 ರ ಡಿಕ್ರಿ ರದ್ಧಾಯಿತಿ ಕೋರಿ ನನ್ನ ತಂದೆ ದಾವೆ ಸಲ್ಲಿಸಿದ್ದು ಅದು ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಓ. ಎಸ್. 177/2011 ರ ಡಿಕ್ರಿ ಹಾಗೂ ಓ. ಎಸ್. 172/2011 ರ ರಿಕ್ರಿ ರದ್ಧಾಯಿತಿ ಕೋರಿ ಮಾಡಿದ ದಾವೆ ವಜಾ ಆಗಿದ್ದನ್ನು ಪ್ರಶ್ನೆ ಮಾಡಿ ನನ್ನ ತಂದೆ ಮಾನ್ಯ ಉಚ್ಚ ನ್ಯಾಯಾಲಯಲ್ಲಿ ಡೆಬ್ಲ್ಯೂ .ಪಿ. ನಂ.100478/2017 ಮತ್ತು 100750/2017 ರನ್ನು ಹಾಕಿರುತ್ತಾರೆ ಅದರಲ್ಲಿ ಓ. ಎಸ್. 177/2011 ರಲ್ಲಿ ಅರ್ಜಿ ಸಲ್ಲಿಸುವಂತೆ ಆದೇಶವಾಗಿರುತ್ತದೆ ಆ ಪ್ರಕಾರ ಈ ಕೇಸಿನ ನಮ್ಮ ಪರ ವಕೀಲರೆ ಓ. ಎಸ್. 177/2011 ರಲ್ಲಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಓ. ಎಸ್. 177/2011 ರಲ್ಲಿ ನನ್ನ ತಂದೆ ಸಲ್ಲಿಸಿದ ಅರ್ಜಿ ವಜಾ ಆದ ನಂತರ ನನ್ನ ತಂದೆ ನಮ್ಮ ಮೂಲಕ ಈ ದಾವೆಯನ್ನು ಹಾಕಿಸಿರುತ್ತಾನೆ ಅಂದರೆ ಸರಿಯಿಲ್ಲ.

**ಓ. ಎಸ್ .:248/18**
**ಪಿ. ಡಬ್ಲ್ಯೂ: 1**

ಈ ದಾವೆಯಲ್ಲಿ ಪ್ರತಿ ಮೂದ್ಧತಿಗೆ ನನ್ನ ತಂದೆ ನನ್ನ ಜೊತೆಯಲ್ಲಿ ಬರುತ್ತಾರೆ ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನಾನೇ ಓದಿ ಸಹಿ ಮಾಡಿರುತ್ತೇನೆ.

ಮುಂದುವೆರದ ಪಾಟೀ ಸವಾಲುಃ ಸಮಯ ಕೋರಿರುತ್ತಾರೆ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

2 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು ಗೋಕಾಕ.

ಸಾಕ್ಷಿಯ ಸಹಿ